doc-386
T·P-2

(1)

R No KRNN 12

23 - 10 -1974

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ

SATYAVADI

Golden Jubilee Celebrated Paper

Satyavadi Daily Mysore 4

- For Influential Publicity -

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಸ್ತ್ರೀ ಜಾರಪ್ಪಿತ ಎಂ. ಎಸ್. ಕೃಷ್ಣರಾವ್ [3 ಸ್ಪ.ಸ

ಬಂಗಾಳದಲ್ಲಿ ಪ್ರಜಾಪ್ರಭುತ್ವ ರಕ್ಷಣಾ ಸಪ್ತಾಹ

ಸತ್ಯ ಮತ್ತು ಅಹಿಂಸೆ

(ಮಹಾತ್ಮಾ ಗಾಂಧಿಯವರ ಸಂದೇಶ – ಲೇ : ಯು ಎಸ್. ಮೋಹನರಾವ್)

ಅಹಿಂಸಾ ತತ್ವಗಳಿಗೆ ಅನುಗುಣವಾದ ಸಮಾಜವನ್ನು ರಚಿಸಲು ಸಾಧ್ಯವಿಲ್ಲ ಎಂದು ಹೇಳುವುದು ಈಗಿನ ಫಾಡಿಕೆಯಾಗಿದೆ. ಆದರೆ ಈ ಅಭಿಪ್ರಾಯವನ್ನು ನಾನು ವಿರೋಧಿಸುತ್ತೇನೆ. ಯಾವುದೇ ಒಂದು ಕುಟುಂಬದಲ್ಲಿ ಅಕಾರ್ಯದಲ್ಲಿ ತೊಡಗಿದ್ದ ಮಗನನ್ನು ತಂದೆ ಹೊಡೆದಾಗ, ಮಗ ತಂದೆಯನ್ನು ಪ್ರತಿಯಾಗಿ ಹೊಡೆಯುವುದಿಲ್ಲ; ಏಟು ತಿಂದ ಮಗನು ತಂದೆಯ ಆಜ್ಞೆಯನ್ನು ಪರಿಪಾಲಿಸುವುದು ಸಹಜವಾಗಿದೆ ; ಇದಕ್ಕೆ ಏಟು ಬಿದ್ದದ್ದು ಕಾರಣವಲ್ಲ ; ತಂದೆಯ ಮನ ನೋಯುವಂತೆ ವರ್ತಿಸಿದ್ದಕ್ಕಾಗಿ ಪಶ್ಚಾತ್ತಾಪಪಟ್ಟು, ಆತನ ಆಜ್ಞೆಯನ್ನು ಪಾಲಿಸುವುದು ಸಹಜವೂ ಸತ್ಯವೂ ಆಗಿದೆ ಇದು ಸಮಾಜದ ರಚನೆಯ ಬಗ್ಗೆ ಅದರ ನಡವಳಿಕೆಯ ಬಗ್ಗೆ ನಾನು ಹೊಂದಿರುವ ಸಾಠಸಂಗ್ರಹವಾಗಿದೆ. ಒಂದು ಕುಟುಂಬಕ್ಕೆ ಅನ್ವಯಿಸುವ ಸತ್ಯವು ಸಮಾಜಕ್ಕೂ ಅನ್ವಯಿಸುತ್ತದೆ.

ಹೇಡಿಯಾದವನಿಗೆ ಅಹಿಂಸೆಯನ್ನು ಬೋಧಿಸುವುದೆಂದರೆ ಕುರುಡನಾದವನಿಗೆ ಪ್ರೇಕ್ಷಣೀಯ ಸ್ಥಳಗಳನ್ನು ತೋರಿಸಿದಂತೆಯೇ ಸರಿ ಅಹಿಂಸೆಯು ಶೌರ್ಯ ಸಾಹಸಗಳ ಶಿಖರಪ್ರಾಯವಾಗಿದೆ.

ಯಾವ ಒಬ್ಬ ವ್ಯಕ್ತಿಯಾಗಲಿ ತನ್ನ ವೈಯುಕ್ತಿಕ ಸಂಬಂಧಗಳಲ್ಲಿ ಅಹಿಂಸೆಯನ್ನು ರೂಢಿಸಿಕೊಳ್ಳದೆ, ವ್ಯಾಪಕವಾದ ವ್ಯವಹಾರಗಳಲ್ಲಿ ಅದನ್ನು ಆಚರಣೆಗೆ ತರಲು ಸಾಧ್ಯವೆಂದು ಭಾವಿಸಿದ್ದಲ್ಲಿ ಅದು ಶುದ್ಧ ತಪ್ಪು. ಮನ ಮೆಚ್ಚಿಸಿ ವಂದಿ ಮೆಚ್ಚಿತು ಎಂಬ ನಾಣ್ಣುಡಿಯಂತೆ ಅಹಿಂಸೆಯನ್ನು ಮೊದಲು ಮನೆಯಲ್ಲಿ ಆಚರಣೆಗೆ ತರುವುದು ಅಗತ್ಯ

ಸಚ್ಚಾರಿತ್ರ್ಯದ ಬಂಡವಾಳವಿಲ್ಲದೆ ಸತ್ಯಾಗ್ರಹವನ್ನು ಆಚರಿಸಲು ಸಾಧ್ಯವಿಲ್ಲ. ರಾಜಕೀಯ ಉದ್ದೇಶಗಳಿಗಾಗಿ ಕಾನೂನು ವಿಚಾರ ನಡೆಯುವ ಅಥವಾ ಕಾನೂನು ನಿರ್ಲಕ್ಷಿಸುವ ಚಳುವಳಿಯು ಪ್ರಾಮಾಣಿಕವಾಗಿಯೂ ಗೌರವಯುತವಾಗಿಯೂ ಮತ್ತು ಹೆಚ್ಚಿನ ನಿಗ್ರಹದಿಂದ ಕೂಡಿದುದಾಗಿಯೂ ಇರಬೇಕು ಮತ್ತು ಇಂತಹ ಚಳವಳಿಗೆ ಒಂದು ನಿರ್ದಿಷ್ಟ ಗುರಿ ಮತ್ತು ಸುಸ್ಪಷ್ಟವಾದ ತತ್ವಗಳಿರುವುದೂ ಸಹಜವಾಗಿದೆ. ಇವೆಲ್ಲಕ್ಕೂ ವಿರುದ್ಧವಾಗಿ ಯಾವುದೇ ಒಂದು ದ್ವೇಷ ಸಾಧನೆಗಾಗಿ ಇಂತಹ ಚಳವಳಿಯನ್ನು ನಡೆಸುವುದು ಸರಿಯಲ್ಲ.

ಸತ್ಯಾಗ್ರಹದ ಬಗ್ಗೆ ಪ್ರಯೋಗಗಳನ್ನು ನಡೆಸುತ್ತಿದ್ದಾಗಲೇ, ಸತ್ಯದ ಅನ್ವೇಷಣೆಯಲ್ಲಿ ಅಹಿಂಸೆಗೆ ಎಡೆಯಿಲ್ಲವೆಂಬುದನ್ನು ಅರಿತುಕೊಂಡೆ ನನ್ನ ಪ್ರತಿಸ್ಪರ್ಧಿಯನ್ನು ಹಿಂಸೆಗೆ ಗುರಿಪಡಿಸದೆ ಸಂಯಮದಿಂದ ಮತ್ತು ಸಹಾನುಭೂತಿಯಿಂದ ಅವನ ಒಲಿಸಿಕೊಳ್ಳಲು ಪ್ರಯತ್ನಿಸಬೇಕೆಂದು ನಾನು ಆಗಲೇ ಮನಗಂಡಿದ್ದೆ. ಏಕೆಂದರೆ ಒಬ್ಬನಿಗೆ ಸತ್ಯವೆನಿಸಿದುದು ಬೇರೆಯವನಿಗೆ ತಪ್ಪಾಗಿ ಕಾಣಬಹುದು ಸತ್ಯದ ಬಗ್ಗೆ ನಾನು ಹೊಂದಿರುವ ನಂಬಿಕೆಗೆ ಈ ತತ್ವವು ಪುಷ್ಟಿ ನೀಡುತ್ತದೆ.

ಸತ್ಯ ಮತ್ತು ಅಹಿಂಸೆಯ ಶಕ್ತಿಯಿಂದ ಇಡೀ ವಿಶ್ವವನ್ನು ಬಾಗಿಸಬಹುದು. ರಾಜಕೀಯ ಎಂದರೆ ರಾಷ್ಟ್ರದ ಜೀವನದಲ್ಲಿ ಸತ್ಯ ಮತ್ತು ಸಾಧುಗುಣಗಳನ್ನು ಆಚರಣೆಗೆ ತರುವುದೇ ಸತ್ಯಾಗ್ರಹದ ಸಾರವಾಗಿದೆ

ಜೆ ಪಿಯರ ಬಿಡುಗಡೆ

ಬಿಹಾರ್ ಸರೀಫ್– ಡಿಸೆಂಬರು 3 ರೊಳಗೆ ಬಿಹಾರು ಶಾಸನಸಭೆ ವಿಸರ್ಜಿಸಲ್ಪಡದಿದ್ದರೆ, ತಮ್ಮ ಚಳವಳಿಯನ್ನು ಬೀಹಾರಿನಿಂದ ದೆಲ್ಲೀಗೆ ವರ್ಗಾಯಿಸುವುದಾಗಿ ಶ್ರೀ ಜಯಪ್ರಕಾಶನಾರಾಯಣರು ಬೆದರಿಕೆ ಹಾಕಿದ್ದಾರೆ.

ಪಾಟ್ನಾ ವಿದ್ಯಾರ್ಥಿ ಕ್ರಿಯಾ ಸಮಿತಿ ತಾ || 25 ರಂದು ವಿಜಯದಶಮಿ ದಿವಸ ರಾವಣನ ಪ್ರತಿರೂಪ್ರೋನಾಶಮಾಡುವಂತೆ, ಗಫೂರರ ಮಂತ್ರಿಮಂಡಲವನ್ನು ನಾಶ ಮಾಡಲು ನಿರ್ಧರಿಸಿದೆ.

ಜಯಪುರ– ಜಯಪ್ರಕಾಶರು ಈ ವಾರ ರಾಜಸ್ಥಾನಕ್ಕೆ ಭೇಟಿ ಕೊಡುವರೆಂಬ ವಾರ್ತೆ ಕಾಂಗ್ರೆಸ್ಸನ್ನು ಗಾಬರಿ ಮತ್ತು ಭೀತಿಗೊಳಿಸಿದೆ.

●

ಮೈಸೂರು ರೇಸಿಸ್

ಮೈಸೂರು– ಭಾನುವಾರ ಮುಕ್ತಾಯಗೊಂಡ ರೇಸಿಂಗ್ ಸೀಸ್ಸ ಹಿಂದಿನವದಕ್ಕಿಂತ ಹೆಚ್ಚು ಕಾಲಾವ್ಧಿಗಿತು – 18 ದಿನಗಳಿದ್ದದ್ದನ್ನು ಮತ್ತೂ 2 ದಿನ ಹೆಚ್ಚಿಸಲಾಯಿತು – 250 ಕುದುರೆಗಳು, 20 ಟ್ರೇನರುಗಳು, 40 ಜಾಕಿಗಳು ಭಾಗವಹಿಸಿದ್ದರು– ರೂ. 14 ಸಣ ಹಣ – ಉತ್ತಮ ದರ್ಜೆ ಮೈಸೂರು ಡರ್ಬಿ, 2000 ಮತ್ತ 1000 ಗಿನಿ ರೇಸ್‌ಗಳಿದ್ದವು. ರೇಸಸ್ ಒಳ್ಳೆಯಶಸ್ವಿಯಾಗಿನಡೆಯಲು ಕ್ಲಬ್ ಅಧ್ಯಕ್ಷ ಮತ್ತು ಸೀನಿಯರ್ ಸ್ಟಿವರ್ಡ್ ಶ್ರೀ ಎಚ್. ಇರಾನಿ, ಕಮಿಟಿ ಮೆಂಬರುಗಳು ಮತ್ತು ಕಾರ್ಯದರ್ಶಿ ಶ್ರೀ ಖನ್ನಾರವರು ಅಭಿನಂದನೀಯರಾಗಿದ್ದಾರೆ.

●

ಶಾಸನಸಭೆ ನಡೆಸಲಾಗಲಿಲ್ಲ

ತ್ರಿವೇಂದ್ರಂ— ಶಾಸನಸಭೆಯಲ್ಲಿ ವಿರೋಧಿಗಳು ಗಲಾಟೆಯಿಂದ ಒಳಗೇ ಸತ್ಯಾಗ್ರಹ ಪ್ರಾರಂಭಿಸಿದ್ದರಿಂದ ಸ್ಪೀಕರ್‌ರು ಸಭೆಯನ್ನು ಅನಿರ್ದಿಷ್ಟ ಕಾಲಕ್ಕೆ ಮುಂದು ವರಿಸಿದರು.

ಮುಖ್ಯಮಂತ್ರಿಗಳು ದೆಲ್ಲಿಗೆ

ಹುಬ್ಬಳ್ಳಿ— ಇಲ್ಲಿ ನಡೆವ ಡಿ. ಸಿ. ಸಿ. ಅಧ್ಯಕ್ಷರುಗಳ ಸಭೆಯಲ್ಲಿ ಭಾಗವಹಿಸಬೇಕಾಗಿದ್ದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್ ರವರು, ಆ ಕಾರ್ಯಕ್ರಮವನ್ನು ಪಡಿಸಿ ಮತ್ತೆ ದೆಲ್ಲಿಗೆ ಮಂತ್ರಿಮಂಡಲ ಪುನರ್ರಚನೆ ಬಗ್ಗೆ ಸಮಾಲೋಚನೆಗಾಗಿ ಪ್ರಯಾಣ ಬೆಳೆಸಿದರು

ಶ್ರೀಮಂ ಭಿಕ್ಷುಕಿ

ವೆನಿಸ್— ಇಲ್ಲಿಗೆ ಹತ್ತಿರದ ಬಾಸಲಿಯಾನೋ ಪಟ್ಟಣದಲ್ಲಿಯ 50 ವರ್ಷಗಳಿಂದಲೂ ಭಿಕ್ಷೆ ಎತ್ತುತ್ತಿದ್ದ 78 ವರ್ಷದ ಎಕ್ಕೆನೇಗಿಲ್ಡಾ ಲಬಾರ್ಬನೋ ಎಂಬುವಳು ಸೋಮವಾರ ಏಕಾಏಕಿ ಬೀದಿಯಲ್ಲೇ ಸತ್ತು ಹೋದಳು – ಅವಳ ಮನೆ ಶೋಧಿಸಿದಾಗ ಪೋಲೀಸರು 6 ಚೀಲಗಳ ತುಂಬ ನೋಟು ಮತ್ತು ನಾಣ್ಯಗಳಿದ್ದದ್ದನ್ನು ಕಂಡರು.

ಪ್ರಜಾಪ್ರಭುತ್ವ ರಕ್ಷಿಸಿ ಸಪ್ತಾಹ

ಕಲ್ಕತ್ತಾ— ಜಯಪ್ರಕಾಶನಾರಾಯಣರ ಚಳುವಳಿಗೆ, ಕಾಂಗ್ರೆಸ್ಸಿನ ವಿರುದ್ಧ ಚಳವಳಿ ಬೆಂಬಲಕ್ಕಾಗಿ ಯುವಕ ಕಾಂಗ್ರೆಸ್ ನವೆಂಬರ್ 5 ರಿಂದ 12 ರವರೆಗೆ ಪ್ರಜಾಪ್ರಭುತ್ವ ರಕ್ಷಿಸಿ ಸಪ್ತಾಹ" ಆಚರಣೆಗೆ ಕರೆಕೊಟ್ಟಿದೆ

ಜಯಪ್ರಕಾಶರ ಚಳವಳಿ

ಪಾಟ್ನಾ— ಜಯಪ್ರಕಾಶ ನಾರಾಯಣರ ಚಳುವಳಿ ತೀವ್ರಗೊಳ್ಳುವುದು ನವೆಂಬರು 4 ರಿಂದ ಪ್ರಾರಂಭವಾಗುವುದು.

ಬೊಂಬಾಯಿ— ಮಾಜಿ ಕೇಂದ್ರ ಮಂತ್ರಿ ಶ್ರೀ ಚಾಗ್ಲಾರು, ಚಳವಳಿಯ ಬಗ್ಗೆ ಸಂಶಯವಿಲ್ಲವೆಂದಿರುವರು ; ದೇಶದ ಪ್ರಸ್ತುತ ಸರಕಾರ ಒಬ್ಬ ವ್ಯಕ್ತಿಯದೆಂದೂ, ಒಂದು ಪಾರ್ಟಿಬೆಂಬಲದ್ದೆಂದೂ ಪ್ರಜಾಪ್ರಭುತ್ವದ ಅಣುವೂ ಇಲ್ಲವೆಂದೂ ಹೇಳಿದರು.

ಇಂಡೋರು— ಬೀಹಾರು ಚಳುವಳಿ ಅದುಮಲು ಸೈನ್ಯ ಉಪಯೋಗಿಸಿದರೆ ತೀವ್ರ ಪರಿಣಾಮ ಉಂಟಾಗುವುದೆಂದು ಸೋಷಲಿಸ್ಟ್ ನಾಯಕ ಮಧುಲಿಮೆ ಹೇಳಿದರು

ಇದಕ್ಕೆ ಪರ್ಯವಸಾನ ನೋಡಬೇಕು !

ವಾಷಿಂಗ್ಟನ್— ಕೆನಡಾದಲ್ಲಿ ಪ್ರಕಟವಾಗುವ ಟೈಂ ಮತ್ತು ರೀಡರ್ಸ್ ಡೈಜೆಸ್ಟ್ ಆವೃತ್ತಿಗಳಲ್ಲಿಯ ಜಾಹಿರಾಗಳ ಮೇಲೆ ತೆರಿಗೆ ವಿಧಿಸಬೇಕೆಂದು ಸರಕಾರ ಒಂದು ಕಡೆ ಯೋಚಿಸುತ್ತಿದ್ದರೆ, ಹಾಗೆ ಮಾಡಿದಕ್ಕೆ ಅಲ್ಲಿ ಆ ಪತ್ರಿಕೆಗಳ ಪ್ರಕಟಣೆಯನ್ನೇ ನಿಲ್ಲಿಸುವುದಾಗಿ ಆ ಪತ್ರಿಕೆಗಳವರು ಬೆದರಿಗೆ ಹಾಕಿದ್ದಾರೆ !

★

Remember

You are quite safe in your dealings with

Bank Road Bahusar

Firm Noted for Genuine Good Business

Help The Gerakshana

— Humanitarian Propoganda Monthly....

SHAKTI

SUDHA

A Superb Tonic

Protect the Cow

Contribute Liberally to the National Defence Fund

Quality Printing Neat Binding

Lakshminarasimha Press

Sivarampet, Mysore 1

ವುಡ್‌ಲಾಂಡ್ 18 10 74 ರಿಂದ

ಅವೋಫು 5 ನೇ ವಾರ

ಇಮ್ತಿಹಾನ್ ● Imtihan

★ ತನುಜ ★ ಏನೋಪ ಖನ್ನ ★ ಬಿಂದು

ಅಭಿನಯಿಸಿರುವ ಅಮೋಘ ಹಿಂದಿ ವರ್ಣರಂಜಿತ ಕಲಾಕೃತಿ

ನಿರ್ದೇಶನ – ಮಹದನ್ ಸಿಂಹ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ದಿನ ೧೧ ಪ್ರದರ್ಶನಗಳು

ಅ ಪೆ ರಾ 17 10 74 ರಿಂದ

ಆ ಗಲೇ ಲಗ್ ಜಾ

ಪಾತ್ರ – ಶಶಿಕಪೂರ್ ಶರ್ಮಿಲಾ ಟಾಗೂರ್ ಶತ್ರುಘ್ನಸಿನ್ಹ · ಓಂ ಪ್ರಕಾಶ್

ಈಸ್ಟ್‌ಮನ್ ಕಲರ್ ಚಿತ್ರ ಸಂಗೀತ – ಆರ್. ಡಿ. ಬರ್ಮನ್

ಮೋಹಕ ಅಭಿನಯದ ಮಹೋನ್ನತ ಈಸ್ಟ್‌ಮನ್ ಕಲರ್
ಹಿಂದಿ ಚಿತ್ರ

ದಿನ ೨೨ ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Edited Printed and Published by Dhammapracharanirata M S. Krishna Rao (Proprietor) at the Satyavadi Press, Chamarajapuram Mysore